SATYAVADI Founded 1917 Regd. No. M 1299.

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 165 | ಶುಕ್ರವಾರ 8—3—46 | ಬೆಲೆ ಪ್ರತಿ 3 ಪೈ

ವಿವಿಧ ವರ್ತಮಾನ

ಸ್ಪೇನ್ ಸಮಸ್ಯೆಯನ್ನು ವಿಶ್ವ ಭದ್ರತಾ ಸಂಸ್ಥೆಯಲ್ಲಿ ಚರ್ಚಿಸುವಬೆಂಬ ಫ್ರಾನ್ಸಿನ ಸೂಚನೆಗೆ ಬಿಷ್ಟಾ ಅವರಿಕ ಗಳಿಂದ ಉತ್ತರಬಂದಿಲ್ಲ.

ಬಗ್ದಾಲಿಯಲ್ಲಿ ಸಂಭವಿಸಿದ ಬೈಟ್ಪೆ ಅನಾಹುತವನ್ನು ತಪ್ಪಿಸಲು ಭಾರತ ಸರ್ಕಾರವು ಅಸಮರ್ಥವಾದುದನ್ನು ಕುರಿತು, ಕೇಂದ್ರ ಸಭೆಯಲ್ಲಿ ಮಂಡಿಸಲ್ಪಟ್ಟ ಖಂಡನಾ ನಿರ್ಣಯವನ್ನು 56-38 ಮತಗಳಿಂದ ಅಂಗೀಕೃತವಾಯಿತು.

ಸ್ಪೇನ್ ಸರ್ಕಾರದ ತೀರ್ಮಾನ ವಾದ ಫ್ರಾನ್ಸ್, ಸ್ಪೇನ್ ಗಡಿಯನ್ನು ಸಂಪೂರ್ಣ ಬಂದು ಮಾಡಿದೆ.

ತುಮಕೂರಿನ ಕೃಷ್ಣಾ ಟಾಕೀಸಿನ ಹಿಂಭಾಗದ ಪೆಟ್ರೋಲಿನ ಬಳಿ ನಿಂತಿದ್ದ ಲಾರಿಯೊಂದಕ್ಕೆ ಅಕಸ್ಮಿಕ ಬೆಂಕಿ ತಗುಲಿ ಸುಟ್ಟು ಭಸ್ಮವಾಗಿ ರೂ. 25000 ನಷ್ಟ ಅಂದಾಜಾಗಿದೆ.

ಪೇಷಾವರ್‌ನಲ್ಲಿ ಅಧ್ಯಕ್ಷೆ ಆಜಾದರು ಭಾಷಣ ಮಾಡುತ್ತಾ ಮುಂದಿನ ವರ್ಷ ಭಾರತಕ್ಕೆ ಸ್ವಾತಂತ್ರ್ಯ ಲಭಿಸುವುದೆಂದರು.

ಅಲಹಾಬಾದಿನಲ್ಲಿ ಕ್ಯಾ॥ ಖಾನವಾಜರನ್ನು ಪಂ॥ ನೆಹರು ಸ್ವಾಗತಿಸಿದರು. ಪುರುಷೋತ್ತಮನಲ್ಲಿ ನಾ ನವಾಜ್ ಮಾತನಾಡುತ್ತಾ ನೇತಾಜಿ ಇಚ್ಛೆಯನ್ನು ನೆರವೇರಿಸುವುದಾಗಿ ನುಡಿದರು.

ಪಂಜಾಬ್ ವಿಶ್ವ ಮಂತ್ರಿ ಮಂಡಲ ರಚನೆಯನ್ನು ಕುರಿತು ಅ॥ ಭಾ॥ ಮುಂ॥ ಲೀ॥ ಕಾರ್ಯದರ್ಶಿ ನವಾಬ್ಜಾದ ಲಿಯಾಖತರು ಲೀಗಿನ ವಿಷಯದಲ್ಲಿ ಬ್ರಿಟಿಷರು ಅನ್ಯಾಯ ಮಾಡುತ್ತಿರುವರೆಂದು ಲಾಹೋರಿನಲ್ಲಿ ನೆಂದಿದ್ದ ಸಭೆಯಲ್ಲಿ ಖಂಡಿಸಿದರು ಮಿಶ್ರ ಪಕ್ಷ ನಾಯಕರ ವಿರುದ್ಧ ಪ್ರದರ್ಶನವಾಯಿತು.

ಮೈಸೂರಿನಲ್ಲಿ ಮಹಾಜನ ಸಭೆ

ಕಳೆದ ತಾ॥ 3 ರಲ್ಲಿ 'ರ್ಯಾಷನ್ ಲಿಸ್ಟ್' ಕಛೇರಿಯಲ್ಲಿ ನಗರದ ಕೆಲವು ಮಾನ್ಯ ವ್ಯಕ್ತಿಗಳ ಸಭೆ ಸೇರಿತ್ತಂತೆ. ನಗರದಲ್ಲಿ ಕಷ್ಟಕ್ಕೆ ಸಿಲುಕಿರುವ ವ್ಯಕ್ತಿಗಳ ಸಹಾಯಾರ್ಥವಾಗಿ ಆಲ್ಲಿಯೇ ಒಂದು ಸಭೆ ಅವತಾರತಾಳಿತಂತೆ. ಮಹಾಜನ ಸಭೆ ಎಂದು ಅದಕ್ಕೆ ನಾಮ ಕರಣವಾಯಿತಂತೆ. ಅ॥ವ॥ ಭೆಯ ಉದಾತ್ತ ಧ್ಯೇಯ ಕಷ್ಟಪಡುತ್ತಿರುವವರಿಗೆ ಸಹಾಯ ಮಾಡುವುದಕ್ಕಂತೆ. ಮಹಾ ವಿದ್ವಾನ್ ಟಿ. ಎ ನಂಜಿಂ ಮಹಾಚಾರ್ಯರನ್ನು ಅವರು ಮಾಡಿರುವ ಅಮೋಘ ಜ್ಯೋತಿಷ್ಯ ಸೇವೆಗಾಗಿ ಸತ್ಕರಿಸಲು ಒಂದು ಸಮಿತಿ ನೇಮಕವಾಗಿ ಚಂದಾ ಎತ್ತಿ ಸಭೆಯು ಪ್ರಥಮದಲ್ಲೇ ತನ್ನ ಉದಾತ್ತ ಧ್ಯೇಯವನ್ನು ತೋರುವುದಂತೆ !!!

ಸರ್ಕಾರಿ ಸುದ್ದಿ

ಮೈಸೂರು ಲೋಕಲ್ ಸರ್ವಿಸ್ ಮತ್ತು ಪ್ಲೀಡರ್ ಪರೀಕ್ಷೆಗಳು ಮೇ ತಾ॥ 6 ರಿಂದ ಪ್ರಾರಂಭವಾಗುವುವು.

ಮಾರ್ಚಿ ತಾ॥ 1 ರಿಂದ ಜುನಾವಣಾ ಕಮಿಷನರ ಕೋರ್ಟ್ ಬೆಂಗಳೂರು ಪ್ರಿನ್ಸಿಪಲ್ ಡಿ॥ ಮತ್ತು ಸೆ॥ ಜಡ್ಜರ ಕೋರ್ಟ್‌ನಲ್ಲಿ ನಡೆಯುವುದೆಂದು ಪ್ರಕಟವಾಗಿದೆ.

ರಾಮರಾಜನಗರ ತಾಲ್ಲೂಕು ಹರದಾನ ಹಳ್ಳಿಯಲ್ಲಿರುವ ಶ್ರೀ ಸಿದ್ದಲಿಂಗೇಶ್ವರ ಮಿ ವತ್ತು ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನಗಳು ಪ್ರಾಚೀನ ಸ್ಥಲ ವಸ್ತುಗಳೆಂದು ಸರ್ಕಾರದವರಿಂದ ಹುಕುಂ ಮಾಡಲ್ಪಟ್ಟಿದೆ.

ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ಹೆಡ್ಡು ಜಾತ್ರೆ ಸಂಬಂಧವಾಗಿ ನಂಜನಗೂಡಿನಲ್ಲಿನ ನಿರ್ದಿಷ್ಟವಾದ ಕೆಲವು ಸ್ಥಳಗಳು ಮಾರ್ಚಿ ತಾ॥ 9 ರಿಂದ 19 ರ ನಿರ್ದಿಷ್ಟ ಕೆಲ ಘಂಟೆಗಳವರೆಗೆ ವಾಹನ ಸಂಚಾರಕ್ಕೆ ತಡೆಗಟ್ಟಲಾಗಿದೆಯೆಂದೂ ಅಂದಿನ ವಾಹನಗಳಿಗೆ ಈ ನಿರ್ಬಂಧವಿಲ್ಲವೆಂದೂ ಪ್ರಕಟವಾಗಿದೆ.

ವಿದ್ಯಾರ್ಥಿಗಳು ಮತ್ತು ಮಿಲ್ ಕೆಲಸಗಾರರು ಡೆಲ್ಲಿಯಲ್ಲಿ ವಿಜಯೋತ್ಸವಕ್ಕೆ ವಿರೋಧ ಪ್ರದರ್ಶನ ನಡೆಸಿದ ಪಯುಕ್ತ ಪೋಲೀಸರು ಲಾಠಿ ಛಾರ್ಜು ಮಾಡಿದರು.

ಕಾಶಿ, ಮಾ 6 — ವಿಚಾರಣೆಗೊಳಪಟ್ಟಿದ್ದ ಅಪರಾಧಿಗಳನ್ನು ಎಳೆದು ತಂದರೆಂಬ ಅಪಾದನೆಯ ಮೇಲೆ ಗುರಿಪಡಿಸಲ್ಪಟ್ಟಿದ್ದ ಪೋ॥ ಇನ್ಸ್‌ಪೆಕ್ಟರ್ ಮತ್ತ 8 ಮಂದಿ ಕಾನಸ್ಟೇಬಲುಗಳು ನಿರಪರಾಧಿಗಳೆಂದು ಬಿಡುಗಡೆಯಾಯಿತು.

ಸವದೆಹಲಿ ಮಾ 7 — ಪುಂಡರ ಗುಂಪು ಟೌನ್ ಹಾಲನ್ನು ಮುತ್ತಿ ವಿದ್ಯಾ ಇಲಾಖೆ ಅ॥ ಸೆಕ್ರಟರಿಯ ಮೇಲೆ ಹೂಕುಂಡ ಎಸೆದು ಕಟ್ಟಡಕ್ಕೆ ಬೆಂಕಿ ಹತ್ತಿಸಿ ಸುಟ್ಟರು. ಅಲ್ಲಿಯ ಟೆಲಿಫೋನ್, ಪೋಸ್ಟ್ ಸುಂಕದ ಕಟ್ಟೆಗಳನ್ನು ಸುಡಲಾಯಿತು. ಗಲಭೆಕಾರರು ಸಾವಿರಾರು ಮೊಂದಿಯಿದ್ದರು. ಪೋಲೀಸರು ಗುಂಡುಹಾರಿಸಿದರು ಗೂರ್ಕಾ ಸೈನಿಕರು ಕರೆಸಲ್ಪಟ್ಟರು. ನಂತರ ವಾಪಸು ಮಾಡಲ್ಪಟ್ಟರು.

ಆಹಾರಾಭಾವದ ಪ್ರಯುಕ್ತ ಈ ವರ್ಷ ಬೆಂಗಳೂರಿನಲ್ಲಿ ಹುದುರೆ ಜೂಜು ನಡೆಯುವುದಿಲ್ಲವೆಂದು ಸಂಸ್ಥಾನಕ್ಕೆ ಹುದುರೆಗಳು ಬಾರದಂತೆ ಪ್ರತಿಬಂಧಿಸಲ್ಪಡುವುದೆಂದು ತಿಳಿಯಬಂದಿದೆ.

ಬೊಂಬಾಯಿನಲ್ಲಿ ಒಂದು ಬಗೆಯ ಸಿಡಿಬು ಜನವರಿಯಿಂದ ಹಂಡಿದೆ. ಇದರಿಂದ ಸಾವು ಹೆಚ್ಚಾಗಿರುವುದಂತೆ. ಸಿಡಿಬು ತಗುಲಿದ 10 ಮಂದಿಯಲ್ಲಿ 5 ಮಂದಿ ಸಾಯುತ್ತಿರುವರಂತೆ ಜನವರಿಯಲ್ಲಿ 946 ಜನರಿಗೆ ತಗುಲಿ 400 ಮಂದಿ ಸತ್ತರಂತೆ.

ನಾಗಪುರ, ಮಾ 6 — ನಿರಶನವ್ರತವನ್ನವಲಂಬಿಸಿರುವ ಜ॥ ಆವರಿಯವರ ಸ್ಥಿತಿಯು ಚಿಂತಾಜನಕವಾಗಿರುವುದೆಂದು ಡಾಕ್ಟರುಗಳ ಅಭಿಪ್ರಾಯ. ಪಂ॥ ಶುಕ್ಲಾರವರು ಆವರಿಯವರನ್ನು ಸಮಾಧಾನ ಪಡಿಸಿ ತಮ್ಮ ಸಲಹೆ ಎಲ್ಲರಿಗೂ ಸೂಕ್ತ ಕಂಡರೆ ಸರ್ದಾರ ಪಟೇಲರಿಗೆ ತಿಳಿಸಿ ತಕ್ಷಣಿಲಕ ಅವೇರಿ ಉಸವಾಸ ನಿಲ್ಲಿಸುವುದಾಗಿ ಹೇಳಿರುವರು

ಜಮ್ಮು ನಗರದಲ್ಲಿ ಮಳೆ ಬರಲೆಂದು ಸಾಧುವೊಬ್ಬನು ಉಪವಾಸಮಾಡುತ್ತಿದ್ದು ಮೋಡಗಳು ಬಂದನಂತರ ನಿಂತಿರುವುದು.

ಶ್ರೀ ಗಾಂಧೀಜೀಯವರ ದಗ್ಧಹಸ್ತವು

ಶ್ರೀ ಗಾಂಧಿಯವರ ಹಸ್ತವು ದಗ್ಧ ಹಸ್ತವಾಗಿರುವುದು ಅವರು ಯಾರನ್ನು ಆಶೀರ್ವದಿಸುವರೋ ಅವರ ಭವಿತವ್ಯವು ನಾಶವಾಗಿಬಿಡುವುದು. ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಇವರು ಶ್ರೀ ಪಟ್ಟಾಭಿಯವರನ್ನು ಎತ್ತಿ ಹಿಡಿದ ಅವರನ್ನು ಆಶೀರ್ವದಿಸಿದರು. ಆದರೆ ಈಗ ಅವರನ್ನು ವಿರೋಧಿಸಿದ್ದ ಶ್ರೀ ಸುಭಾಷ್‌ಚಂದ್ರಬೋಸರಿಗೆ ವಿಜಯಮಾಲಿಕೆ ಬಿತ್ತು. ಆಗ ಗಾಂಧಿಯವರು " ಪಟ್ಟಾಭಿಯವರ ಸೋಲು ನನ್ನ ಸೋಲು " ಎಂದು ಒಂದು ಪ್ರಕಟಣೆಯನ್ನು ಹೊರಡಿಸಿದರು. ತರುವಾಯ ' ಜೈ ಹಿಂದ್ ' ಇರಬೇಕೋ ಅಥವಾ ' ವಂದೇಮಾತರಂ ' ಇರಬೇಕೋ ಎಂದು ಒಬ್ಬರು ಕೇಳಿದಾಗ ' ವಂದೇಮಾತರಂ ' ಗೆ ಪರಂಪರೆ ಇದೆ. ಅದು ಬಹುಕಾಲದಿಂದಲೂ ಬಂದಿದೆ ಅದುಪರಿಂದ ಅದನ್ನು ಮೊದಲು ಅಂದು ನಂತರ ' ಜಯಹಿಂದ್ ' ಅನ್ನಬೇಕೆಂದು ಹೇಳಿ ' ವಂದೇಮಾತರಂ ' ನ್ನು ಎತ್ತಿ ಹಿಡಿದರು. ಆದರೆ ಈಗ ' ವಂದೇಮಾತರಂ ' ಅದೃಶ್ಯವಾಗಿ ಬಿಟ್ಟಿತು. ಎಲ್ಲೆಲ್ಲಿಯೂ ಜಯಹಿಂದ್ ಶ್ಲೋಕವನ್ನೇ ಪ್ರತಿಸಭೆಯಲ್ಲೂ ಜನರು ಅನ್ನಹತ್ತಿರುವರು.

ಮಧುರಾದಲ್ಲಿ ಜರುಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ ಶ್ರೀ ಗಾಂಧಿಯವರು ಒಂದು ಆಶೀರ್ವಾದ ಪರ ಸಂದೇಶವನ್ನು ಕಳಿಸಿ ಅದರಲ್ಲಿ ತಮ್ಮ ಬಂಧುಗಳಾದ ಶ್ರೀ ರಾಜಾಜಿಯವರ ಗುಣಕಥನವಾಡಿ ಅವರನ್ನು ಆಶೀರ್ವದಿಸಿ ಅವರಿಗೆ ಕಾಂಗ್ರೆಸಿನಲ್ಲಿ ಮುಕ್ತ್ಯದ್ವಿತನವನ್ನು ಕೊಡಬೇಕೆಂದು ಒಂದು ಪತ್ರವನ್ನು ಬರೆದಿದ್ದರು. (ಸಶೇಷ)

ನಂಜನಗೂಡು ದೊಡ್ಡಜಾತ್ರೆ ದನಗಳ ಪ್ರದರ್ಶನ

14—3—46 ರಲಾಗಾಯ್ತು. 18—3—46 ರವರಿಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ ದನಗಳ ಪ್ರದರ್ಶನವನ್ನು ಈ ಊರಿನ ಜೋಗಿತೋಪಿನಲ್ಲಿ ಏರ್ಪಡಿಸಿರುತ್ತೆ. ನೀರು ಸೌಕರ್ಯ ಚೆನ್ನಾಗಿದೆ ರಾತ್ರಿಗಳಿಗೆ ಸುಂಕವಿಲ್ಲ. ವೈದ್ಯ ಸಹಾಯ ಏರ್ಪಡಿಸಿದೆ ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣಪ್ಪ
ಪ್ರೆಸಿಡೆಂಟ್
ಟೌನ್ ಮುನಿಸಿಪಲ್ ಕೌನ್ಸಿಲ್
ನಂಜನಗೂಡು

ಸರ್ಕಾರಿ ಸುದ್ದಿ

ಆರ್ಕಿಯೊಲಜಿ ಡೈರೆಕ್ಟರಾದ ಶ್ರೀ ಎಂ. ಎಚ್. ಕೃಷ್ಣ, ಎಂ. ಎ. ರವರಿಗೆ ಸರಾಸರಿ ವೇತನದ ಲೇಲೆ ತಾ॥ 1 ರಿಂದ ಎರಡು ತಿಂಗಳು ಫರ್ಲೋ ರಜಾವನ್ನು ಕೊಡಲಾಗಿದೆ. ಆರ್ಕಿಯಾಲಜಿ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ನರಸಿಂಹಾಚಾರ್ಯ ಎಂ. ಎ. ರನ್ನು ಈ ಕಾಲಾವಧಿಯಲ್ಲಿ ಆರ್ಕಿಯಾಲಜಿ ಡೈರೆಕ್ಟರನ್ನಾಗಿ ನೇಮಿಸಲಾಗಿದೆ.

ನು ಭಾ ಷ್

ರವರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —
— ಇಂದು ನೇತಾಜಿ

ಬರೆದವರು **" ಕಾಂತ್ "**

ಸಾಹಿತ್ಯ ಮಂದಿರ
ಜಗನ್ಮೋಹನ ಬಂಗ್ಲೆ ರಸ್ತೆ
ಮೈಸೂರು

At Ranjit

Vijay Laxmi

ಶೋಭನ ಸಮರ್ಥ
ಮೋತಿಲಾಲ್
ಮುಂತಾದವರು ಪಾತ್ರವಹಿಸಿರುವ

ವಿಜಯಲಕ್ಷ್ಮಿ

ಹಸಕ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್. ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamareja Agrahar, Mysore

At Opera — From 8-3-46

ಮೆಹತಾಬ್ — ಸುರೇಂದ
ಪಾತ್ರವಹಿಸಿರುವ
.... ವಿಶ್ವಾಸ್ ....

MORNING SHOWS

ಜಂಷೆಡ್ಪುರದಲ್ಲಿ ಪಾರ್ಲಿಮೆಂಟರಿ ರಾಯಭಾರ ವರ್ಗ

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓರ ಗುಂಟಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೌತರಿಯಾದುದು. ಏವಂಗಳಿಗೆ ಮತ್ತು ಪ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.